15ನೇ ಜನವರೀ	1884	ಮಂಗಳವಾರ
11ನೇ ಫಿಬ್ರವರೀ	,,	ಸೋಮವಾರ
11ನೇ ಮಾರ್ಚೀ	,,	ಮಂಗಳವಾರ
1ನೇ ಏಪ್ರೆಲ್	,,	ಗುರುವಾರ
9ನೇ ಜೂನ್	,,	ಸೋಮವಾರ
14ನೇ ಜುಲೈ	,,	ಡಿಟೋ
11ನೇ ಆಗಸ್ಟ್	,,	ಡಿಟೋ
8ನೇ ಸೆಪ್ಟಂಬರ್	,,	ಡಿಟೋ
13ನೇ ಅಕ್ಟೋಬರ್	,,	ಡಿಟೋ
10ನೇ ನವಂಬರ್	,,	ಡಿಟೋ
8ನೇ ಡಿಸಂಬರ್	,,	ಡಿಟೋ

ಥರ್ಯಾಫ್ಟ್ರೀ ಬಗ್ಯೆ ಕಮ್ಮಿಟ್ ಮಾಡುವ ಅಧಿಕಾರವುಳ್ಳ ತಮಾಂ ಮಾಜೀಸ್ಟ್ರೇಟರುಗಳೂ, ಅವರಿಂದ ಕಮ್ಮಿಟ್ ಮಾಡಲ್ಪಡುವ ಪೊಕದ್ದಮೆಗಳಲ್ಲಿ ಫಿರ್ಯಾದಿ ವ ಸಾಕ್ಷಿಗಾರರ ಹಾಜರಾತಿ ಬಗ್ಯೆ ಸದರೀ ತಾರೀಖುಗಳಲ್ಲಿ ತಕ್ಕ ಏರ್ಪಾಡು ಮಾಡತಕ್ಕದ್ದೆಂದು ಕೇಳಿ ಕೊಳ್ಳಲ್ಪಟ್ಟಿರುತ್ತಾರೆ.

ವಿ. ಎಸ್. ನರಸಿಮ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 4ನೇ ಜನವರೀ 1884.

ಇದರಿಂದ ತಿಳಿಸುವದೇನಂದರೆ, ಶಿವಮೊಗ್ಗ ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಸ್ಯ 1884ನೇ ಇಸವಿ ಏಪ್ರೆಲ್ ಗುರ್ಯೇ ತಾರೀಖು ಮೊದಲು 1885ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಸೇರಿ ಜೀಕಾದ ಆಹಾರ ವೆಗೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಶಿವಮೊಗ್ಗ ಜೈಲ್ ಸೂಪರ್‌ಟೆಂಡೆಂಟರವರು, ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲ್ಲವರಿಂದ ಕಾಯಂ ಮಾಡಲ್ಪಡಲಿಕ್ಕೆ ಗುರಿಯಾಗಿ ಸ್ಯ 1884ನೇ ಇಸವಿ ಮಾರ್ಚೀ 1ನೇ ತಾರೀಖುವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರದು.

3. "ಶಿವಮೊಗ್ಗ ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರೆನ್ಸೀ ನೋಟುಗಳ ಮೂಲಕ ಡಿಪಾಜಿಟ್‌ನಿಶೀ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಶಿವಮೊಗ್ಗ ಡಿಸ್ಟ್ರಿಕ್ಟು ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಶಿವಮೊಗ್ಗ ಡಿಸ್ಟ್ರಿಕ್ಟು ಜೈಲ್ ಸೂಪರ್‌ಟೆಂಡೆಂಟರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಬಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

				ರೂ.	ಆ.	ಪೈ.
ನೇಟಿವ್ ಕೂಲಿಯವರಾದ ಗಂಡಸರು		A	ಕ್ಲಾಸ್	..	..	..
ಡಿಟೋ	ಡಿಟೋ	B	,,	..	..	
ಡಿಟೋ	ಡಿಟೋ	C	,,	..	..	
ಡಿಟೋ	ಹುಡುಗರಾದ ಖೈದೀರು			..	..	
ಡಿಟೋ ಕೂಲೀ ಮಾಡದ ಗಂಡಸರು, ಹೆಂಗಸರು, ವಿಚಾರಣೆಯಲ್ಲಿ ಇರತಕ್ಕವರು		D	ಕ್ಲಾಸ್			
ಯೂರೋಪಿಯರ್ಗಳು ವ ಈಸ್ಟ್ ಇಂಡಿಯರ್ಗಳು				..	..	

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ ಆನಪತ್ಯ ಪಥ್ಯಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದ ಯಂಣ್ಣೆ, ಲಾಂದ್ರ ಗಳು, ಮತ್ತು ಅವುಗಳ ರಿಪೇರಿ ಮಾಡಿಸುವಣ, ಸ್ನಾನ ಮಾಡಲಿಕ್ಕೆ ಶೀಗೇಕಾಯಿ, ತಮೂಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲಾಯಿ, ಪರಕೆಗಳು, ಗೂಡೆ ಬಾಪೆ ಮಾಡಲಿಕ್ಕೆ ಬಿದುರು, ಮಡಿಕ್ಕೆ ಸುಡುವದಕ್ಕೆ ನಾದೆ, ಹೆಣ್ಣು ಖೈದೀರ ಮಕ್ಕಳಿಗೆ ಬೇಕಾದ ಹಾಲು, ರೊಟ್ಟಿ, ಸಕ್ಕರೆ ವಗೈರೇ ಪದಾರ್ಥಗಳು, ಹೊಗೆ ಹಾಕುವದಕ್ಕೆ ಗಂಧಕ, ಚವಳುಮಂಣ್ಣು, ಮತ್ತು ಖೈದಿಗಳಿಗೆ ಕ್ರಮವಾಗಿ ಸರಬರಾಯಿ ಮಾಡಲ್ಪ ಡುವ ಬಟ್ಟೆ ಶಿವಾಯಿ, ತಮೂಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರ್ಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ, ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮುಂಜೂರಾದ ದರಖಾಸ್ತುದಾರನ, ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಲಿಕ್ಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ಮೆಂಟ್ ಪತ್ರಗಳ ಮೂಲಕವಾದರೂ 1,000 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತಿಸಲ್ಪಟ್ಟ ತಾರೀಖು ಮೊದಲು ಒಂದು ವಾರದ ಒಳಗಾಗಿ ಕೊಡಲಿಕ್ಕೆ ತಪ್ಪಿದರೆ, ಸದರಿ ಡಿಪಾ ಜಿಟ್ ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು, ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಶಿವಮೊಗ್ಗಾ ಜೈಲ್ ಸೂಪರ್ಟೆಂಡೆಂಟರವರಿಂದ ಮೊಬಲಗು ಕೊಡ ಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಬಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ, ಇಟ್ಟು ಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳ್ಗೆ 7¼ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಕಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ ಶಿವಮೊಗ್ಗಾ ಜೈಲ್ ಸೂಪರ್ಟೆಂಡೆಂಟರವರ ಯಖ್ತ್ಯಾರಿಯಿಂದ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಯು ಹಾಕಲ್ಪಡುವದು, ಬಾರ್ ಬಾರ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನ್ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

14. ಕಂಟ್ರಾಕ್ಟು ತಪ್ಪಿ ನಡೆಯುವ ದರೋಬಸ್ತು ಸಂಗತಿಗಳಿಳಗೂ ಶಿವಮೊಗ್ಗಾ ಜೈಲ್ ಸೂಪರ್ಟೆಂಟೆಂಡೆಂಟರವರ ನಿರ್ಣಯವೇ ಅಖೈರಾಗಿರತಕ್ಕದ್ದು.

15. ಕಂಟ್ರಾಕ್ಟುದಾರನು ಖೈದಿಗಳ ವುಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

16. ಇನ್ಯಾವ ಸಂಗತಿಯನ್ನಾದರೂ ತಿಳಿಯಬೇಕಾದರೆ ಜೈಲ್ ಸೂಪರ್ಟಿರೆಂಡೆಂಟರವರನ್ನು ಕೇಳಿ ತಿಳದುಕೊಳ್ಳಬಹುದು.

17. ಅಡಿಗೆ ಮಾಡುವಲ್ಲಿ ಮಡಿಕೆಗಳು ವಡದು ಹೋಗುವದರಿಂದ ಆಹಾರವೇನಾದರೂ ಅಕಸ್ಮಾತ್ ನಷ್ಟವಾದರೆ ಅದರ ಲುಕ್ಸಾ ನನ್ನು ಕಂಟ್ರಾಕ್ಟುದಾರನೇ ಕಟ್ಟಿಕೊಡತಕ್ಕದ್ದು.

18. ಹಾಲೀ ಶಿವಮೊಗ್ಗಾ ಜೈಲ್‌ನಲ್ಲಿ 250 ಮಂದಿ ಖೈದೀರಿದ್ದಾರೆ, ಈ ಸಾಲ್‌ನಲ್ಲಿ ಷುಮಾರ್ 300ರ ವರಿಗೆ ಜಾಸ್ತೀಯಾಗೆಬ ಹುದಾಗಿ ಅಂದಾಜ್ ಇರುತ್ತೆ.

19. ಆಹಾರ ದರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮುಕ್ತುಮಿನ ಮೈಸೂರು ಗೆಜಿಟ್ಟಿನಿಂದಾಗಲಿ, ಶಿವಮೊಗಾ ಜೈಲ್ ಸೂಪರ್ಟೆಂಡೆಂಟರವರನ್ನ ಕೇಳಿ ಆಗಲಿ ತಿಳದುಕೊಳ್ಳಬಹುದು.

ಪಿ. ಪಂಚನಾಥರಾವ್,
ಜೈಲ್ ಸೂಪರ್ಟೆಂಡೆಂಟ್.